## ಬಿ.ಇಡಿ. ಪದವಿ ಪ್ರವೇಶಾತಿಯ ಸಾಮಾನ್ಯ ಅರ್ಹತೆ

- ಬಿ.ಇಡಿ ಪದವಿ ಪ್ರವೇಶಕ್ಕೆ ಅಭ್ಯರ್ಥಿಯು ಬೆಂಗಳೂರು ನಗರ ವಿಶ್ವವಿದ್ಯಾಲಯ/ಭಾರತದ ಯಾವುದೇ ವಿಶ್ವವಿದ್ಯಾಲಯದಿಂದ ಸ್ನಾತಕ ಪದವಿಯನ್ನು ಪಡೆದವರಾಗಿರಬೇಕು. 10+2+3/4/5 ಮಾದರಿಯ ಶಿಕ್ಷಣವನ್ನು ಶೇ. ೫೦ರಷ್ಟು ಅಂಕಗಳೊಂದಿಗೆ ಪೂರ್ಣಗೊಳಿಸಿದ ಅಭ್ಯರ್ಥಿಗಳು ಬಿ.ಇಡಿ ಶಿಕ್ಷಣವನ್ನು ಪಡೆಯಲು ಅರ್ಹರಾಗಿರುತ್ತಾರೆ.
- ಪದವಿ ಅಥವಾ ಸ್ನಾತಕೋತ್ತರ ಪದವಿಯಲ್ಲಿ ಶೇ. 45%ರಷ್ಟು ಅಂಕಗಳನ್ನು ಪಡೆದ ಪರಿಶಿಷ್ಟಜಾತಿ/ಪಂಗಡ, ಪ್ರವರ್ಗ-೧ ಮತ್ತು ದೈಹಿಕ ಊನಶಕ್ತ ವಿದ್ಯಾರ್ಥಿಗಳು ಬಿ.ಇಡಿ ಪದವಿ ಪ್ರವೇಶಕ್ಕೆ ಅರ್ಹರಾಗಿರುತ್ತಾರೆ.

## ಎರಡು ವರ್ಷಗಳ ಬಿ.ಇಡಿ ಕಾರ್ಯಕ್ರಮಕ್ಕೆ ಸಂಭಂದಿಸಿದಂತೆ ಬೆಂಗಳೂರು ನಗರ ವಿಶ್ವವಿದ್ಯಾಲಯದ ನಿಯಮಾವಳಿಗಳು

- ನಾಲ್ಕು ಸೆಮಿಸ್ಟರ್ ಒಳಗೊಂಡಿರುವ ಎರಡು ವರ್ಷಗಳ ಬಿ.ಇಡಿ ಕಾರ್ಯಕ್ರಮದ ಶೈಕ್ಷಣಿಕ ಅಗತ್ಯತೆಗಳನ್ನು ಯಶಸ್ವಿಯಾಗಿ ಪೂರೈಸಿದ ವಿದ್ಯಾರ್ಥಿಗಳಿಗೆ ಬಿ.ಇಡಿ ಸ್ನಾತಕ ಪದವಿಯನ್ನು ನೀಡಲಾಗುತ್ತದೆ.

## ಬಿ.ಇಡಿ ಪದವಿಯ ಬೋಧನ ವಿಷಯಗಳ ಕುರಿತ ಪರಿಚಯಾತ್ಮಕ ಅಂಶ :

- **ಹಾರ್ಡ್ ಕೋರ್** ವಿಷಯಗಳು ಬಿ.ಇಡಿ ಕಾರ್ಯಕ್ರಮದ ಸಾಮಾನ್ಯ ಮತ್ತು ಕಡ್ಡಾಯ ಅಧ್ಯಯನದ ಮುಖ್ಯ ವಿಷಯಗಳಾಗಿವೆ. **ಸಾಫ್ಟ್ ಕೋರ್** ವಿಷಯಗಳು ಆಯಾ ಕಾಲೇಜುಗಳಲ್ಲಿ ಲಭ್ಯವಿರುವ ಮತ್ತು ವಿದ್ಯಾರ್ಥಿಗಳು ತಮ್ಮ ಬೋಧನ ಅಭ್ಯಾಸಕ್ಕೆ ಆರಿಸಿಕೊಳ್ಳಬೇಕಾದ ವಿಷಯಾಧಾರಿತ ಪಠ್ಯವಿಷಯಗಳಾಗಿವೆ. ಹಾರ್ಡ್ ಕೋರ್ ವಿಷಯಗಳು ಸಾಮಾನ್ಯವಾಗಿದ್ದು ಸಾಫ್ಟ್ ಕೋರ್ ವಿಷಯಗಳಲ್ಲಿ ಎರಡು ವಿಷಯಗಳನ್ನು ಆಯ್ಕೆಮಾಡಿಕೊಳ್ಳಬೇಕಾಗುತ್ತದೆ.
- ಚಟುವಟಿಕೆ ಆಧಾರಿತವಾಗಿ ವೃತ್ತಿಪರ ಸಾಮರ್ಥ್ಯ ಮತ್ತು ಕೌಶಲ್ಯಗಳನ್ನು ಬೆಳೆಸಲು ಸೂಕ್ತವಾದ ಚಟುವಟಿಕೆಗಳನ್ನು ಪ್ರತಿಯೊಂದು ಸೆಮಿಸ್ಟರ್ ಒಳಗೊಂಡಿರುತ್ತದೆ.
- ಬಿ.ಇಡಿ ಕಾರ್ಯಕ್ರಮವು ವಿದ್ಯಾರ್ಥಿಗಳ ಸಾಮರ್ಥ್ಯವನ್ನು ಅಳೆಯಲು ಕ್ರೆಡಿಟ್ ವ್ಯವಸ್ಥೆಯನ್ನು ಅವಳವಡಿಸಿಕೊಂಡಿದೆ. ಕ್ರೆಡಿಟ್ ಮಾಪನವು ಒಳಗೊಂಡ ಅಂಶವೆಂದರೆ ಪ್ರತಿಯೊಂದು ಸೆಮಿಸ್ಟರ್ ನ ಕಲಿಕೆ ಮತ್ತು ಪರೀಕ್ಷೆ, ಹಾಜರಾತಿ, ನಿಯೋಜಿತ ಕಾರ್ಯ, ಯೋಜನೆಗಳ ತಯಾರಿ ಹಾಗು ಸಲ್ಲಿಕೆ ಮತ್ತು ಸಮುದಾಯದತ್ತ ಕಾರ್ಯಕ್ರಮ ಮೊದಲಾದ ಪ್ರಾಯೋಗಿಕ ಚಟವಟಿಕೆಗಳಾಗಿವೆ.
- ವಿದ್ಯಾರ್ಥಿಗಳ ಪ್ರಗತಿಯನ್ನು ಅಳೆಯುವ ಅಥವ ಗುರುತಿಸುವ ಸಲುವಾಗಿ ಗ್ರೇಡ್ ವ್ಯವಸ್ಥೆಯನ್ನು ಒಳಗೊಂಡಿದೆ.
- ಸರಾಸರಿ ಶ್ರೇಣಿ ಸೂಚ್ಯಾಂಕ ಪದ್ಧತಿಯು ಬಿ.ಇಡಿ ಪದವಿಯ ಭಾಗವಾಗಿದ್ದು, ನಾಲ್ಕು ಸೆಮಿಸ್ಟರ್ ಗಳಲ್ಲಿನ ಎಲ್ಲಾ ವಿಷಯಗಳು ಮತ್ತು ಚಟವಟಿಕೆಗಳಲ್ಲಿ ಗಳಿಸಿದ ಗ್ರೇಡ್ ಪಾಯಿಂಟ್ ಗಳನ್ನು ಪರಿಗಣಿಸಿ ಕ್ರೆಡಿಟ್ ಲೆಕ್ಕಿಸಲಾಗುತ್ತದೆ. ಹೀಗೆ ಲೆಕ್ಕಿಸಿದ ಅಂಕಗಳನ್ನು ದಶಮಾಂಶ ರೀತಿಯಲ್ಲಿ ನಿರ್ಧರಿಸಿ ನೀಡಲಾಗುತ್ತದೆ.

## ಕೋರ್ಸಿನ ಅವಧಿ:

- ಸಿ.ಬಿ.ಎಸ್.ಇ ಎರಡು ವರ್ಷಗಳ ಬಿ.ಇಡಿ ಪದವಿಯು ನಾಲ್ಕು ಸೆಮಿಸ್ಟರ್ ಗಳನ್ನು ಒಳಗೊಂಡಿದ್ದು, ಒಟ್ಟು ೯೬ ಕ್ರೆಡಿಟ್ ಗಳನ್ನು ಹೊಂದಿದೆ.
- ಬಿ.ಇಡಿ ಪದವಿಯ ಕೇಂದ್ರಭಾಗ ಎಂದರೆ ರೂಢಿ ಅಭ್ಯಾಸ ಬೋಧನೆಯಾಗಿದೆ. ಮೊದಲ ಹಂತದ ಅಭ್ಯಾಸ ರೂಢಿ ಬೋಧನೆಯನ್ನು ದ್ವಿತೀಯ ಸೆಮಿಸ್ಟರ್ ನಲ್ಲಿ ನಾಲ್ಕು ವಾರಗಳಲ್ಲಿ ಕೈಗೊಳ್ಳುವಂತೆ ನಿರ್ಧರಿಸಲಾಗಿದೆ(೪ ಕ್ರೆಡಿಟ್). ಎರಡನೇ ಹಂತದ ಅಭ್ಯಾಸ ರೂಢಿ ಬೋಧನೆಯನ್ನು ಮೂರನೇ ಸೆಮಿಸ್ಟರ್ ನಲ್ಲಿ ಹತ್ತು ವಾರಗಳ ನಡೆಸುವಂತೆ ಸೂಚಿಸಲಾಗಿದೆ(೧೨ ಕ್ರೆಡಿಟ್). ಮೂರನೇ ಹಂತದ ಕಾರ್ಯಕ್ರಮವು ಪೂರ್ವೋತ್ತರ ತರಬೇತಿ ಕಾರ್ಯಕ್ರಮವಾಗಿದ್ದು, ನಾಲ್ಕನೇ ಸೆಮಿಸ್ಟರ್ ನಲ್ಲಿ ಆರು ವಾರಗಳ ಕಾಲ ನಡೆಯಲಿದೆ. ಪೂರ್ವ ರೂಢಿ ಅಭ್ಯಾಸ ಬೋಧನೆಯನ್ನು ಅಳವಡಿಸಲಾಗಿದೆ(೮ ಕ್ರೆಡಿಟ್).

## ಬೋಧನ ಮಾಧ್ಯಮ:

- ಬಿ.ಇಡಿ ಕಾರ್ಯಕ್ರಮವು ವಿದ್ಯಾರ್ಥಿಗಳ ಆಯ್ಕೆಗೆ ಅನುಗುಣವಾಗಿ ಕನ್ನಡ ಮತ್ತು ಇಂಗ್ಲಿಷ್ ಎರಡೂ ಭಾಷೆಗಳಲ್ಲಿರುತ್ತದೆ. ವಿದ್ಯಾರ್ಥಿ ಶಿಕ್ಷಕರು ತಮ್ಮ ಬೋಧನಾ ಅಭ್ಯಾಸ ತರಬೇತಿಯಲ್ಲಿಯೂ ಸಹ ತಮ್ಮ ಆಯ್ಕೆಯಂತೆ ಬೋಧನಾ ಮಾಧ್ಯಮವನ್ನು ಆಯ್ಕೆ ಮಾಡಿಕೊಳ್ಳಬಹುದು. ಪ್ರಶಿಕ್ಷಣಾರ್ಥಿಗಳು ತಮ್ಮ ಸೆಮಿಸ್ಟರ್ ಪರೀಕ್ಷೆಗಳಲ್ಲಿಯೂ ಸಹ ತಮ್ಮ ಆಯ್ಕೆಯ ಭಾಷೆಯಲ್ಲಿ ಪರೀಕ್ಷೆ ಬರೆಯಬಹುದಾಗಿದೆ.

## ಹಾಜರಾತಿ:

- ಪ್ರತಿಯೊಬ್ಬ ವಿದ್ಯಾರ್ಥಿಯು ಪ್ರತಿಯೊಂದು ಸೆಮಿಸ್ಟರ್ ನಲ್ಲಿ ಶೇ. ೮೦ರಷ್ಟು ಹಾಜರಾತಿಯನ್ನು ಹೊಂದಿರಬೇಕು. ಹಾಗೆಯೇ ಪ್ರಾಯೋಗಿಕ ಚಟುವಟಿಕೆಗಳಲ್ಲಿ ಶೇ. ೯೦ರಷ್ಟು ಹಾಜರಾತಿಯನ್ನು ಹೊಂದುವುದು ಕಡ್ಡಾಯವಾಗಿದೆ.
- ಪ್ರತಿಯೊಂದು ಸೆಮಿಸ್ಟರ್ ನ ಅಂತಿಮ ಪರೀಕ್ಷೆಗೆ ಮಾನ್ಯತೆಯನ್ನು ಪಡೆಯಲು ಪ್ರಶಿಕ್ಷಕರು ನೀಡುವ ನಿಯೋಜಿತ ಕಾರ್ಯವನ್ನು ಪೂರ್ಣಗೊಳಿಸಿ ವರದಿ ಸಲ್ಲಿಸುವುದು ಕಡ್ಡಾಯವಾಗಿದೆ.
- ಸೆಮಿಸ್ಟರ್ ಅವಧಿಯಲ್ಲಿ ನಡೆಯುವ ಪ್ರತಿಯೊಂದು ಕಾರ್ಯಕ್ರಮದಲ್ಲಿ ಭಾಗವಹಿಸಿ ವರದಿಯನ್ನು ಸಲ್ಲಿಸುವುದರೊಂದಿಗೆ ಅಭ್ಯಾಸ ರೂಢಿ ಬೋಧನೆಯನ್ನು ಪೂರ್ಣಗೊಳಿಸುವುದು ಮುಖ್ಯವಾದುದಾಗಿದೆ.

**ಮೂರು ಹಂತಗಳ ನಿಕಟ ಸೇವಾ ತರಬೇತಿ ಕಾರ್ಯಕ್ರಮ :**

- **ಪೂರ್ವ ನಿಕಟ ಸೇವಾ ತರಬೇತಿ**ಯು ಕಾಲೇಜು ಹಂತದ ಕಾರ್ಯಕ್ರಮವಾಗಿದ್ದು, ಇಲ್ಲಿ ಬೋಧನಾ ಕೌಶಲ್ಯಗಳ ತರಬೇತಿ ನಡೆಯುತ್ತದೆ. ವಿದ್ಯಾರ್ಥಿ ಶಿಕ್ಷಕರು ಈ ಅವಧಿಯಲ್ಲಿ ಕಲಿತ ವಿವಿಧ ಬೋಧನ ಕೌಶಲ್ಯಗಳನ್ನು ತಮ್ಮ ಪ್ರದರ್ಶನ ಪಾಠ ಸಂದರ್ಭದಲ್ಲಿ ಅನಾವರಣಗೊಳಿಸುತ್ತಾರೆ.
- **ಶಾಲಾ ನಿಕಟ ಸೇವಾ ತರಬೇತಿ**ಯು ಶಾಲಾ ಹಂತದ ತರಬೇತಿಯಾಗಿದ್ದು, ಮೂರನೇ ಸೆಮಿಸ್ಟರ್ ನ ಭಾಗವಾಗಿದೆ. ಈ ಹಂತದಲ್ಲಿ ವಿದ್ಯಾರ್ಥಿ ಶಿಕ್ಷಕರನ್ನು 10 ವಾರಗಳ ಕಾಲ ನಿರ್ದಿಷ್ಟ ಶಾಲೆಗಳಿಗೆ ರೂಢಿ ಅಭ್ಯಾಸ ಬೋಧನೆಗಾಗಿ ನಿಯೋಜಿಸಲಾಗುತ್ತದೆ. ಪ್ರಶಿಕ್ಷಣಾರ್ಥಿಗಳು ಶಾಲಾ ಪರಿಸರ ಮತ್ತು ಕಾರ್ಯಸ್ಥಿತಿಗಳ ಬಗೆಗೆ ನೈಜ ಅನುಭವವನ್ನು ಪಡೆಯುವ ಉದ್ದೇಶವಾಗಿದೆ. ಈ ಅವಧಿಯಲ್ಲಿ ಒಟ್ಟು ೨೦+೨೦ ಪಾಠಗಳನ್ನು ಬೋಧಿಸಬೇಕಾಗುತ್ತದೆ. ಪಾಠ ಬೋಧನೆಯ ಜೊತೆಗೆ ಶಾಲಾ ಸಹಪಠ್ಯ ಚಟುವಟಿಕೆಗಳ ಆಯೋಜನೆ ಮತ್ತು ಪಾಲ್ಗೊಳ್ಳುವಿಕೆಯ ಕುರಿತಾದ ವರದಿಯನ್ನು ಸಲ್ಲಿಸಬೇಕಾಗುತ್ತದೆ. ಬೋಧನೆಯ ಪರಿಣಾಮಕಾರತ್ವವನ್ನು ಪರೀಕ್ಷಿಸುವ ಸಲುವಾಗಿ ಘಟಕ ಪರೀಕ್ಷೆಯನ್ನು ನೀಡಿ ಬೋಧನ ಕಲಿಕಾ ಪ್ರಕ್ರಿಯೆಯ ಸಾಫಲ್ಯತೆಯನ್ನು ಪರೀಕ್ಷಿಸುವ ಅವಕಾಶವಾಗಿರುತ್ತದೆ. ಉತ್ತಮ ಶಿಕ್ಷಕರಾಗಲು ಅಗತ್ಯವಾದ ಚಟುವಟಿಕೆಗಳಿಂದ ಪ್ರಶಿಕ್ಷಣಾರ್ಥಿಗಳು ತರಬೇತಿ, ಅಭ್ಯಾಸ, ಸಂದೇಹ, ಅನುಭವ ಮತ್ತು ಅನುಭವದ ಪ್ರತಿಫಲತೆ ಮೊದಲಾದವುಗಳಿಗೆ ಸಂಬಂಧಿಸಿದ ಅಂಶಗಳನ್ನು ಅಳವಡಿಸಿಕೊಳ್ಳಲು ಈ ಅವಧಿಯು ಹೆಚ್ಚು ಸಹಕಾರಿಯಾಗಿದೆ.
- **ಪೂರ್ವೋತ್ತರ ನಿಕಟ ಸೇವಾ ತರಬೇತಿ**ಯು ಬಿ.ಇಡಿ ತರಬೇತಿಯ ಕೊನೆಯ ಹಂತವಾಗಿದ್ದು, ನಾಲ್ಕನೆಯ ಸೆಮಿಸ್ಟರ್ ನ ಭಾಗಿದೆ. ಈ ಅವಧಿಯಲ್ಲಿ 8 ವಾರಗಳ ಕಾಲ ನಡೆಯುವ ಪೂರ್ವೋತ್ತರ ನಿಕಟ ಸೇವಾ ತರಬೇತಿಯು ಪ್ರಶಿಕ್ಷಣಾರ್ಥಿಗಳಿಗೆ ಸಮುದಾಯ ಆಧಾರಿತ ಕಾರ್ಯಕ್ರಮ, ವಿಶೇಷ ಶಾಲೆಗಳ ಭೇಟಿ ಮತ್ತು ಪಠ್ಯಪುಸ್ತಕಗಳ ಪರಾಮರ್ಶನ ಮೊದಲಾದ ಪ್ರಾಯೋಗಿಕ ಕಾರ್ಯಗಳ ಮೂಲಕ ಶೈಕ್ಷಣಿಕ ಅನುಭವವನ್ನು ಒದಗಿಸುವ ವ್ಯವಸ್ಥೆಯಾಗಿದೆ. ಈ ಹಂತದಲ್ಲಿ ಪ್ರಶಿಕ್ಷಣಾರ್ಥಿಗಳು ತಮ್ಮ ಶಾಲಾ ನಿಕಟ ಸೇವಾ ತರಬೇತಿ ಅವಧಿಯಲ್ಲಿ ಪಡೆದ ಅನುಭವಾತ್ಮಕ ಕಾರ್ಯಗಳ ಅನಾವರಣಕ್ಕೆ ಅವಕಾಶ ಕಲ್ಪಿಸಲಾಗಿದೆ. ಒಟ್ಟಾರೆಯಾಗಿ ಪ್ರಶಿಕ್ಷಣಾರ್ಥಿಗಳ ಬೋಧನಾ ಸಾಮರ್ಥ್ಯದ ಅಂಶಗಳನ್ನು ಬಾಹ್ಯ ಪ್ರಮಾಣಕ ಪರೀಕ್ಷೆ ಮತ್ತು ಸಂದರ್ಶನದ ಮೂಲಕ ಮೌಲ್ಯ ಮಾಪನ ಮಾಡಲಾಗುತ್ತದೆ.